# ಹೆಚ್ಚುತ್ತಲೇ ಇದೆ ಕೊರೊನಾ ಕಾಟ

ಉದಯ: 21.06.20

## ವಿಧಾನಸೌಧದಲ್ಲೂ ಸೋಂಕು ಪತ್ತೆ

**ಕೊರೊನಾ:** ರಾಜಧಾನಿ ಬೆಂಗಳೂರು ಸಹಿತ ಇಡೀ ರಾಜ್ಯದಲ್ಲಿ ಕೊರೊನಾತಂಕ ಹೆಚ್ಚುತ್ತಲೇ ಇದ್ದು ಶನಿವಾರ ಒಂದೇ ದಿನ 416 ಹೊಸ ಪ್ರಕರಣ ಪತ್ತೆಯಾಗಿವೆ. ಜತೆಗೆ 9 ಸಾವು ಸಂಭವಿಸಿರುವುದು ಇನ್ನಷ್ಟು ಭಯ ಸೃಷ್ಟಿಸಿದೆ. ಅಲ್ಲದೆ, 74 ಮಂದಿ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಕ್ತಿಕೇಂದ್ರ ವಿಧಾನಸೌಧಕ್ಕೂ ಕೊರೊನಾ ಸೋಂಕು ಆವರಿಸಿಕೊಂಡಿದೆ. ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಮಾಧ್ಯಮ ಕೇಂದ್ರದ ಉಸ್ತುವಾರಿ ವಾರ್ತಾ ಇಲಾಖೆಯ ಉಪ ನಿರ್ದೇಶಕರಿಗೂ ಸೋಂಕು ತಗುಲಿರುವುದು ದೃಢಪಟ್ಟಿದೆ. ಬೆಂಗಳೂರಿನ ಕಲಾಸಿಪಾಳ್ಯ ಪೊಲೀಸ್ ಠಾಣೆಯ 55 ವರ್ಷದ ಹೆಡ್ ಕಾನ್ಸ್‌ಟೇಬಲ್ ಕೊರೊನಾದಿಂದ ಮೃತಪಟ್ಟಿದ್ದಾರೆ.

ಕೊರೊನಾ ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಾಗೂ ಆರೋಗ್ಯ ಇಲಾಖೆ ಎಲ್ಲ ರೀತಿಯ ಕ್ರಮ ತೆಗೆದುಕೊಳ್ಳುತ್ತಿದ್ದರೂ, ಕೊರೊನಾ ಸೋಂಕಿತ ಸಂಖ್ಯೆ ಮಾತ್ರ ಏರುತ್ತಲೇ ಇದೆ. ಶುಕ್ರವಾರ ಸಂಜೆ 5 ಗಂಟೆಯಿಂದ ಶನಿವಾರ ಸಂಜೆ 5 ಗಂಟೆವರೆಗಿನ ಆರೋಗ್ಯ ಇಲಾಖೆಯ ವರದಿಯ ಪ್ರಕಾರ ಪತ್ತೆಯಾಗಿರುವ 416 ಹೊಸ ಪ್ರಕರಣಗಳಲ್ಲಿ ಹೊರ ರಾಜ್ಯದ ಸಂಪರ್ಕ ಮತ್ತು ಉಸಿರಾಟದ ತೊಂದರೆ ಅನುಭವಿಸುತ್ತಿರುವವರ ಸಂಖ್ಯೆಯೇ ಹೆಚ್ಚಿದೆ.

**ಬೆಂಗಳೂರಿನಲ್ಲಿ 1076 ಕೇಸ್:** ರಾಜ್ಯದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 8697 ಏರಿದ್ದು, ರಾಜಧಾನಿ ಬೆಂಗಳೂರಿನಲ್ಲಿ ಸಾವಿರದ ಗಡಿ ದಾಟಿದೆ. ಈವರೆಗೆ ಕಲಬುರಗಿ, ಉಡುಪಿ ಜಿಲ್ಲೆ ಮಾತ್ರ ಸಾವಿರ ಸೋಂಕಿತ ಸಂಖ್ಯೆ ಹೊಂದಿತ್ತು. ಈ ಪಟ್ಟಿಗೆ ಬೆಂಗಳೂರು ಸೇರಿಕೊಂಡಿದೆ. ಶನಿವಾರ 181 ಮಂದಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದಾರೆ. ಈವರೆಗೆ 5391 ಮಂದಿ ಆಸ್ಪತ್ರೆಯಿಂದ ಗುಣಮುಖರಾಗಿ ಮನೆಗೆ ಹೋಗಿದ್ದಾರೆ. ಇನ್ನು 3170 ಸಕ್ರಿಯ ಪ್ರಕರಣಗಳು ಇವೆ. ಈವರೆಗೆ ಕೊರೊನಾ ಸೋಂಕಿನಿಂದ 132 ಮಂದಿ ಮೃತಪಟ್ಟಿದ್ದು ಅನ್ಯಕಾರಣಕ್ಕೆ 4 ಮಂದಿ ಮೃತರಾಗಿದ್ದಾರೆ. ಶನಿವಾರ ಪತ್ತೆಯಾದ 416 ಪ್ರಕರಣದಲ್ಲಿ 22 ಮಂದಿ ಅಂತಾರಾಷ್ಟ್ರೀಯ ಪ್ರಯಾಣ ಹಿನ್ನೆಲೆ ಮತ್ತು 116 ಮಂದಿ ಅಂತರಾಜ್ಯ ಪ್ರಯಾಣ ಹಿನ್ನೆಲೆ ಹೊಂದಿದ್ದಾರೆ.

### ಭಾರತದಲ್ಲಿ 4 ಲಕ್ಷ ಕೇಸ್

**ಭಾರತದಲ್ಲಿ ಕೊರೊನಾ ಕೇಸ್‌ಗಳ ಸಂಖ್ಯೆ 4 ಲಕ್ಷ ದಾಟಿದೆ. ಶನಿವಾರ ರಾತ್ರಿ ವೇಳೆಗೆ ಸೋಂಕಿತರ ಸಂಖ್ಯೆ 4.01 ಲಕ್ಷ ಮೀರಿದೆ. ಇದರಲ್ಲಿ 1.70 ಲಕ್ಷ ಸಕ್ರಿಯ ಕೇಸ್‌ಗಳಿದ್ದರೆ, 2.17 ಲಕ್ಷ ಮಂದಿ ಚೇತರಿಕೆಯಾಗಿ ಮನೆಗೆ ತೆರಳಿದ್ದಾರೆ. 13 ಸಾವಿರಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಇನ್ನು ಶುಕ್ರವಾರ ಬೆ. 8 ಗಂಟೆಯಿಂದ ಶನಿವಾರ ಬೆ. 8 ಗಂಟೆವರೆಗಿನ ಅವಧಿಯಲ್ಲಿ ದೇಶದಲ್ಲಿ 14,574 ಮಂದಿಗೆ ಸೋಂಕು ತಗುಲಿದೆ. ಇದು ಇದುವರೆಗಿನ ದಾಖಲೆಯಾಗಿದೆ. ಇನ್ನು ಬ್ರೆಜಿಲ್‌ನಲ್ಲಿ ಒಂದೇ ದಿನ 54 ಸಾವಿರಕ್ಕೂ ಹೆಚ್ಚು ಕೇಸ್ ಕಾಣಿಸಿಕೊಂಡಿದ್ದು, ಒಟ್ಟಾರೆ ಪ್ರಕರಣ 10 ಲಕ್ಷ ಮೀರಿದೆ. ಇಲ್ಲಿನ ಸಾವಿನ ಸಂಖ್ಯೆ 50 ಸಾವಿರ ದಾಟಿದೆ.**

ಬೆಂಗಳೂರಲ್ಲಿ ಸಾವಿರ ದಾಟಿದ ಕೊರೊನಾ ➘5